ಗೆ,

ದಿನಾಂಕ: 13/02/2024

**ಮಾನ್ಯ ಜಿಲ್ಲಾ ಪೊಲೀಸ್ ಅಧೀಕ್ಷಕರು**
**ರಾಯಚೂರು ರವರ ಸನ್ನಿಧಿಗೆ,**

ಮಾನ್ಯರೆ,

ವಿಷಯ:- ದೇವದುರ್ಗ ಪೊಲೀಸ್ ಠಾಣೆ ಮತ್ತು ಸಂಚಾರ ಪೊಲೀಸ್ ಠಾಣೆ ಸಿಬ್ಬಂದಿಗಳಿಗೆ ಕರ್ತವ್ಯ ನಿರ್ವಹಿಸಲು ನೈತಿಕ ಸ್ಥೈರ್ಯ ಮತ್ತು ರಕ್ಷಣೆ ನೀಡುವ ಬಗ್ಗೆ.

****0****

ಈ ಮೇಲಿನ ವಿಷಯಕ್ಕೆ ಸಂಬಂಧಿಸಿದಂತೆ ದೇವದುರ್ಗ (ಕಾ.ಸು) ಮತ್ತು ಸಂಚಾರ ಠಾಣೆ ಸಿಬ್ಬಂಧಿಯವರಾದ ನಾವುಗಳು ಮಾನ್ಯರವರಲ್ಲಿ ವಿನಂತಿಸಿಕೊಳ್ಳುವದೇನೆಂದರೆ, ದಿನಾಂಕ: 11-02-2024 ರಂದು ಕಾಸು ಠಾಣೆಯ ಹನುಮಂತ್ರಾಯ ಸಿಪಿಸಿ-499 ರವರನ್ನು ಎಂ.ಎಲ್.ಎ ಮಗ ಸಂತೋಷ ಹಾಗೂ ಪಿ.ಎ ಗಳಾದ ಇಲಿಯಾಜ್ ಮತ್ತು ರಫಿ ಹಾಗೂ ಇತರರು ಸೇರಿಕೊಂಡು ನಮ್ಮ ಸಿಬ್ಬಂಧಿ ಹನುಮಂತ್ರಾಯನ ಮಏಲೆ ಮನೋಸೋ ಇಚ್ಛೆ ಮಾರಾಣಾಂತಿಕ ಹಲ್ಲೆ ಮಾಡಿದ್ದಲ್ಲದೇ ಮತ್ತು ಠಾಣೆಯ ಮುಂದೆ ಧರಣಿ ಕುಳಿತು 3 ಜನ ಪೊಲೀಸ್ ಸಿಬ್ಬಂಧಿಯವರ ಮೇಲೆ ಪ್ರಕರಣ ದಾಖಲಿಸಿದ್ದು ಇದು ರಕ್ಷಣಾ ಇಲಾಖೇಯ ಮೇಲೆಯೇ ದೌರ್ಜನ್ಯವೆಸಗಿದ್ದು ಕಾಣುತ್ತದೆ.

**ದಿನಾಂಕ: 11-02-2024 ರಂದು ನಡೆದ ಸದರಿ ಘಟನೆಗಳಿಗೆ ಸಂಬಂಧಿಸಿದಂತೆ ಸಂಪೂರ್ಣ ವಿವರ**

ದಿನಾಂಕ: 11-02-2024 ರಂದು ಮಧ್ಯಾಹ್ನ 3-00 ಗಂಟೆ ಸುಮಾರಿಗೆ ದೇವದುರ್ಗ ಠಾಣಾ ವ್ಯಾಪ್ತಿಯ ದೊಂಡಂಬಳಿ ಗ್ರಾಮದ ಕೃಷ್ಣಾ ನದಿ ತೀರದಲ್ಲಿ ಅಕ್ರಮವಾಗಿ ಮರಳು ಸಾಗಾಟ ಮಾಡುತ್ತಿದ್ದಾರೆ ಅಂತಾ ಮಾಹಿತಿ ಬಂದ ಮೇರೆಗೆ ಶ್ರೀ ಅಶೋಕ್ ಸದಲಗಿ ಪಿ.ಐ ದೇವದುರ್ಗ ಮತ್ತು ಸಿಬ್ಬಂದಿಗಳಾದ ಶಿವಣ್ಣ ಸಿ.ಹೆಚ್.ಸಿ-88, ಹನುಮಂತ್ರಾಯ ಸಿಪಿಸಿ-499, ಹನುಮಂತಪ್ಪ ಸಿಪಿಸಿ-24 ಮತ್ತು ಮಹೇಶ ಸಿಪಿಸಿ-172, ಹನುಮಂತ ಸಿಪಿಸಿ-312 ರವರು ಮತ್ತು ಪಂಚರೊಂದಿಗೆ ಹೋಗಿದ್ದು ಮರಳು ತುಂಬಿಕೊಂಡು ಸಾಗುತ್ತಿದ್ದ ಟ್ರ್ಯಾಕ್ಟರಗಳ ಚಾಲಕರು ಪೊಲೀಸರನ್ನು ನೋಡಿ, ಟ್ರ್ಯಾಕ್ಟರಗಳನ್ನು ಟ್ರಾಲಿ ಸಮೇತ ಬಿಟ್ಟು ಓಡಿ ಹೋಗಿದ್ದು ಸದರಿ ಟ್ರ್ಯಾಕ್ಟಗಳನ್ನು ಪಂಚನಾಮೆಯ ಮುಖಾಂತರ ನಿಯಮಾನುಸಾರ ಜಪ್ತಿ ಮಾಡಿಕೊಂಡು ಠಾಣೆಗೆ ಬಂದು ಗುನ್ನೆ ನಂ: 47/2024, 48/2024 ಕಲಂ 379 ಐಪಿಸಿ ಪ್ರಕಾರ ಪ್ರಕರಣ ದಾಖಲಾಗಿದ್ದು ಇರುತ್ತದೆ.

**ನಂತರ ಶ್ರೀಮತಿ ಕರೆಮ್ಮ.ಜಿ.ನಾಯಕ್, ಶಾಸಕರು ದೇವದುರ್ಗ ವಿಧಾನಸಭಾ ಕ್ಷೇತ್ರ** ರವರ ಆಪ್ತ ಸಹಾಯಕರಾದ **1) ಇಲಿಯಾಸ್ ಮತ್ತು 2) ರಫಿ** ರವರುಗಳು ಟ್ರ್ಯಾಕ್ಟರಗಳನ್ನು ತಂದು ಪ್ರಕರಣ ದಾಖಲಿಸಿದ ವಿಷಯದಲ್ಲಿ ಹನುಮಂತ್ರಾಯ ಸಿಪಿಸಿ-499 ರವರಿಗೆ ಫೋನ್ ಮಾಡಿ ಪ್ರವಾಸಿ ಮಂದಿರ ದೇವದುರ್ಗಕ್ಕೆ ಬರಲು ತಿಳಿಸಿದ್ದು ಹನುಮಂತ್ರಾಯ ರವರು ಹೋಗಲು ನಿರಾಕರಿಸಿದಾಗ ಸ್ವತಃ ಶಾಸಕರ ಪುತ್ರ **3) ಸಂತೋಷ** ರವರೇ ಖುದ್ದಾಗಿ ಫೋನ್‌ನಲ್ಲಿ ಮಾತಾಡಿ ಕರೆಯಿಸಿಕೊಂಡು ರೂಮ್ ಒಳಗೆ ಹೋದ ತಕ್ಷಣ ಡೋರ್ ಲಾಕ್ ಮಾಡಿ, ಲೈಟ್ ಆಫ್ ಮಾಡಿ ಮೊಬೈಲ್ ಫೋನ್ ಕಸಿದುಕೊಂಡು ಮೇಲಿನ 3 ಜನರು ಹಾಗೂ ಇತರೆ 5-6 ಜನರು ಸೇರಿಕೊಂಡು ಮನಬಂದಂತೆ ಮಾರಣಾಂತಿಕ ಹಲ್ಲೆ ಮಾಡಿದ್ದು ಇರುತ್ತದೆ. ನಂತರ ಹನುಮಂತ್ರಾಯ ಇವರು ಆಸ್ಪತ್ರೆಗೆ ದಾಖಲಾಗಿ ಚಿಕಿತ್ಸೆ ಪಡೆಯುವ ವೇಳೆ ದೂರು ಪಡೆದುಕೊಂಡು ಠಾಣೆ ಗುನ್ನೆ ನಂ: 49/2024 ಕಲಂ: 323, 353, 504, 506 ಸಹಿತ 149 ಐಪಿಸಿ ಮತ್ತು ಎಸ್.ಸಿ/ಎಸ್.ಟಿ ಕಾಯ್ದೆ ಪ್ರಕಾರ ಪ್ರಕರಣ ದಾಖಲಾಗಿದ್ದು ಇರುತ್ತದೆ.

**ಸದರಿ ಪ್ರಕರಣಕ್ಕೆ ಸಂಬಂಧಿಸಿಂತೆ ಆಡಿಯೋ ಮತ್ತು ವಿಡಿಯೋಗಳು ಲಭ್ಯವಿರುತ್ತವೆ.**

14 FEB 2024

ಪುಟ....2 ಕ್ಕೆ

ಪ್ರಕರಣ ದಾಖಲಾಗುತ್ತಿದ್ದಂತೆ ಮಾನ್ಯ ಶಾಸಕರ ಪುತ್ರ, ಆಪ್ತ ಸಹಾಯಕರು ಮತ್ತು ಬೆಂಬಲಿಗರು ಠಾಣೆಗೆ ಬಂದು ನಮ್ಮ ವಿರುದ್ಧವೇ ಪ್ರತಿಭಟಿಸಿ, ನಮ್ಮ ಪೊಲೀಸ್ ಸಿಬ್ಬಂದಿಯವರನ್ನೇ ಟಾರ್ಗೆಟ್ ಮಾಡಿ ಅವರನ್ನೇ ವರ್ಗಾವಣೆ ಮತ್ತು ಅಮಾನತ್ತು ಮಾಡುವಂತೆ ಬಹಿರಂಗವಾಗಿ ಬೇಡಿಕೆ ಇಟ್ಟು ಒತ್ತಡ ಹೇರಿರುವ ಇದು ಅಧಿಕಾರದ ದುರ್ಬಳಕೆ ಮತ್ತು ದುರಹಂಕಾರದ ಪರಮಾವಧಿ ಆಗಿರುತ್ತದೆ.

ಮಾನ್ಯ ಶ್ರೀಮತಿ ಕರೆಮ್ಮ.ಜಿ.ನಾಯಕ್ ಶಾಸಕರು ದೇವದುರ್ಗ ಕ್ಷೇತ್ರದಲ್ಲಿ ಪ್ರಭಾವಿ ಮಾಜಿ ಶಾಸಕರ ವಿರುದ್ಧ ಅಭೂತಪೂರ್ವ ಗೆಲವು ಸಾಧಿಸಲು ಪೊಲೀಸರ ನಿಷ್ಪಕ್ಷಪಾತ ಕರ್ತವ್ಯವೇ ಕಾರಣವಾಗಿರುತ್ತದೆ. ಅವರ ರಕ್ಷಣೆ ನಮ್ಮ ಹೊಣೆಯಂದು ತಿಳಿದು ಹಗಲಿರಳು ಅವರ ರಕ್ಷಣೆಗಾಗಿ ನಿಂತಿದ್ದು ಇಲಾಖೆಗೆ ತಿಳಿದ ವಿಷಯವಾಗಿದೆ.

ಶ್ರೀಮತಿ ಕರೆಮ್ಮ.ಜಿ.ನಾಯಕ್ ರವರು ಶಾಸಕರಾದಾಗಿನಿಂದಲೂ ಪೊಲೀಸರ ಮೇಲೆ ಅಲಿಗೇಶನ್ ಮಾಡಿಕೊಂಡು ಬಂದಿರುತ್ತಾರೆ. ನಾವುಗಳು ಯಾವುದೇ ಕರ್ತವ್ಯಕ್ಕೆ ಹೋದರೂ ಎಲ್ಲಾ ಕರ್ತವ್ಯಗಳಲ್ಲಿಯೂ ಕೂಡಾ ಕರ್ತವ್ಯಕ್ಕೆ ಅಡ್ಡಿಪಡಿಸಿದ ಉದಾಹರಣೆಗಳು ಇರುತ್ತದೆ. ಉದಾ: ಮಟ್ಕಾ ಜೂಜಾಟ, ಇಸ್ಪೀಟ್ ಜೂಜಾಟ, ಕೋಳಿ ಪಂಧ್ಯ ಜೂಜಾಟ, ಅಕ್ರಮ ಮರಳು ದಂದೆ, ಐ.ಎಂ.ವಿ. ಮತ್ತು ಡಿ.ಡಿ ಪ್ರಕರಣಗಳು ದಾಖಲಿಸುವಾಗ ಪ್ರತಿ ಬಾರಿಯೂ ತಮ್ಮನ್ನು ಕೇಳಿ ಹಿಡಿದುಕೊಂಡು ಬರಬೇಕು ಮತ್ತು ಪ್ರಕರಣ ದಾಖಲಿಸುವಾಗ ತಮ್ಮ ಬೆಂಬಲಿಗರು ಹೌದೋ ಅಥವಾ ಅಲ್ಲೋ ಎಂದು ಖಚಿತಪಡಿಸಬೇಕು, ಎಂದು ಒತ್ತಡ ಹೇರುತ್ತಾ ಬಂದಿರುತ್ತಾರೆ. ಈ ಒತ್ತಡವೂ ಕೂಡಾ ದಿನನಿತ್ಯದ ಕರ್ತವ್ಯಗಳಿಗೆ ಮತ್ತು ಕಾನೂನು ಪ್ರಕಾರ ಕರ್ತವ್ಯ ನಿರ್ವಹಿಸಲು ತೊಡಕಾಗಿರುತ್ತದೆ.

ಪೊಲೀಸ್ ಸಿಬ್ಬಂಧಿಗಳ ಮೇಲೆ ಹಲ್ಲೆಗೆ ಸಂಬಂಧಿಸಿದ ಪ್ರಕರಣ ದಾಖಲಾಗಿದ್ದರೂ ಕೂಡಾ ಪ್ರಕರಣವನ್ನು ರಾಜಕೀಯಗೊಳಿಸಿ, ರಾಜಕೀಯ ಪ್ರಭಾವದಿಂದ ಆರೋಪಿತರನ್ನು ದಸ್ತಗಿರಿ ಮಾಡದೇ ಇರುವುದು ಪೊಲೀಸ್ ಇಲಾಖೆಗೆ ನಾಚಿಕೆಗೇಡಿನ ಸಂಗತಿಯಾಗಿರುತ್ತದೆ ಸಾರ್ವಜನಿಕರಲ್ಲಿ ಅಭಿಪ್ರಾಯವು ಕೂಡಾ ಇದೇ ರೀತಿ ಇರುತ್ತದೆ.

ದೇವದುರ್ಗ ಪೊಲೀಸ್ ಸಿಬ್ಬಂಧಿಗಳು ಕರ್ತವ್ಯ ನಿರ್ವಹಿಸಲು ಮಾನಸಿಕ ಮತ್ತು ನೈತಿಕ ಸ್ಥೈರ್ಯ, ಮತ್ತು ರಕ್ಷಣೆಗೆ ಸಂಬಧಿಸಿದಂತೆ ಈ ಕೆಳಕಂಡಂತೆ ನಮ್ಮ ಮನವಿಗಳನ್ನು ಪುರಸ್ಕರಿಸಿ ಇತ್ಯರ್ಥಗೊಳಿಸಲು ವಿನಂತಿ.

## ನಮ್ಮ ಮನವಿಗಳು

1] ನಮ್ಮ ಸಿಬ್ಬಂಧಿಗಳ ಮೇಲೆ ಹಲ್ಲೆ ಮಾಡಿದ ಆರೋಪಿತರು ಎಷ್ಟೇ ಪ್ರಭಾವಿತರಾಗಿದ್ದರೂ ಅವರನ್ನು ಕೂಡಲೇ ದಸ್ತಗಿರಿ ಮಾಡಿ ನ್ಯಾಯಾಂಗ ಬಂಧನಕ್ಕೆ ಒಪ್ಪಿಸುವುದು.

2] ನಾವುಗಳು ದೇವದುರ್ಗ ದಲ್ಲಿ ನಿಷ್ಪಕ್ಷಪಾತವಾಗಿ ಕರ್ತವ್ಯ ನಿರ್ವಹಿಸಲು ರಾಜಕೀಯ ಒತ್ತಡವನ್ನು ತಡೆಗಟ್ಟುವುದು

3] ನಮ್ಮ 3 ಜನರ ಸಿಬ್ಬಂಧಿಗಳ ವಿರುದ್ಧ ದಾಖಲಾದ ಸುಳ್ಳು ಪ್ರಕರಣವನ್ನು " ಬಿ" ಅಂತಿಮ ವರದಿ ಸಲ್ಲಿಸುವುದು

4] ಅಕ್ರಮ ಮರಳು ಸಾಗಿಸುವ ಟ್ರ್ಯಾಕ್ಟರ್ ಗಳ ಮೇಲೆ ಪಿ.ಐ ರವರೊಂದಿಗೆ ದಾಳಿ ಮಾಡಿದ ಸಿಬ್ಬಂಧಿಗಳ ವಿರುದ್ಧ ಯಾವುದೇ ಶಿಸ್ತು ಕ್ರಮ ಕೈಗೊಳ್ಳಬಾರದು

5] ಶಾಸಕರ ನಿವಾಸ ಮತ್ತು ಜೆ.ಡಿ.ಎಸ್. ಪಕ್ಷದ ಕಛೇರಿಯು ಪೊಲೀಸ್ ಕಾಲೋನಿಗೆ ಹೊಂದಿಕೊಂಡಿದ್ದು, ಅವರ ಬೆಂಬಲಿಗರು ದಿನದ 24 ಗಂಟೆಯೂ ಕೂಡಾ ನಮ್ಮ ಕಾಲೋನಿಯಲ್ಲೇ ತಿರುಗಾಡುತ್ತಾ ಅವರ ಮನೆಗೆ ಹೋಗಿ ಬರುವದು ಸಾಮಾನ್ಯವಾಗಿದೆ, ಶಾಸಕರ ಮನೆಗೆ ಹೋಗುವ ಪೊಲೀಸ್ ಕಾಲೋನಿಯ ಲೈನ್‌ನಲ್ಲಿ 12 ಮನೆಗಳಿದ್ದು ಸುಮಾರು 25 ರಿಂದಾ 30 ಮಕ್ಕಳು 10 ವರ್ಷದ ಒಳಗಿನ ಮಕ್ಕಳಿದ್ದು ಆಟ ಆಡಲು, ಹೊರಗಡೆ ಹೋಗಲು ತೊಂದರೆಯಾಗುತ್ತಿದ್ದು, ಶಾಸಕರ ಕಾರ್ಯಕರ್ತರು ಮನೆ ಹೊರಗಡೆ ಬಂದು ನಿಂತಲ್ಲೇ ಮೂತ್ರ ವಿಸರ್ಜನೆ ಮಾಡುತ್ತಾರೆ.

ಪುಟ....3 ಕ್ಕೆ

ಇದರಿಂದ ಪೊಲೀಸ್ ಕಾಲೋನಿಯ ಮಹಿಳೆರಿಗೆ ಮನೆಯಿಂದ ಹೊರಗೆ ಬಾರದಂತ ಪರಸ್ಥಿತಿ ಉಂಟಾಗಿರುತ್ತದೆ. ದೇವದುರ್ಗ ಕ್ಷೇತ್ರದಲ್ಲಿ ಮಹಿಳೆಯೇ ಶಾಸಕರಾಗಿದ್ದರೂ ಕೂಡಾ ನಮ್ಮ ಮಹಿಳೆಯರ ಪರಸ್ಥಿತಿ ನೋಡಿದರೂ ಕೂಡಾ ಸುಮ್ಮನೆ ಇರುವುದು ಕೂಡಾ ಅವರ ಮನಸ್ಥಿತಿಯಾಗಿದೆ. ಮತ್ತು ವಾಹನಗಳ ಓಡಾಟ ಹೆಚ್ಚಾಗಿರುವದರಿಂದ ದೂಳು ಹೆಚ್ಚಾಗಿದ್ದು ವಯಸ್ಸಾದ ತಂದೆತಾಯಿಯವರಿಗೆ ಶ್ವಾಸಕೋಶದ ರೋಗಗಳು ಬರುತ್ತಿವೆ. ಶಾಸಕರ ಮನೆಗೆ ನಮ್ಮ ಪೊಲೀಸ್ ಕಾಲೋನಿಯಿಂದಲೇ ಹೋಗಬೇಕಾಗಿದ್ದು ಅಸಲಿಗೆ ಇಲ್ಲಿ ಅಧಿಕೃತ ರಸ್ತೆಯಿರುವದಿಲ್ಲಾ. ಈ ಬಗ್ಗೆ ಪ್ರೆಶ್ನೆ ಮಾಡಿದರೆ ನಿಮ್ಮನ್ನು ವರ್ಗಾವಣೆ ಮಾಡಿಸುತ್ತೇವೆ ಅಥವಾ ಅಮಾನತ್ ಮಾಡಿಸುತ್ತೇವೆ ಅಂತಾ ಬೆದರಿಕೆ ಒಡ್ಡುತ್ತಾ ಬಂದಿರುತ್ತಾರೆ, ಕಾರಣ ಪೊಲೀಸ್ ಕಾಲೋನಿಯನ್ನು ಸರ್ವೇ ಮಾಡಿಸಿ ಹದ್ದು ಬಸ್ತಿ ಮಾಡಿ ಕಂಪೌಂಡ್ ನಿರ್ಮಿಸಬೇಕು.

ಪೊಲೀಸ್ ಕಾಲೋನಿಯಲ್ಲಿಯೇ ಶಾಸಕರ ಮನೆ ಮತ್ತು ಪಕ್ಷದ ಕಾರ್ಯಾಲಯ ವಿದ್ದು, ನಿನ್ನೆ ಪೊಲೀಸರನ್ನು ಐ.ಬಿ ಗೆ ಕರೆದು ಹೊಡದಿದ್ದು, ನಾಳೆ ನಮ್ಮ ಮನೆಗೆ ನುಗ್ಗಿ ಹೊಡೆಯುವುದಿಲ್ಲಾ ಅಂತಾ ಏನು ಗ್ಯಾರಂಟಿ ಇದೆ. ನಾವು ತಮ್ಮ ಅಧೀನದಲ್ಲಿ ಕರ್ತವ್ಯ ನಿರ್ವಹಣೆ ಮಾಡುವ ಪೊಲೀಸ್ ಸಿಬ್ಬಂದಿಯವರ ಮತ್ತು ಅವರ ಕುಟುಂಬದವರ ರಕ್ಷಣೆ ಮಾಡುವ ಹೊಣೆ ತಮ್ಮದು ಅಂತಾ ತಿಳಿದು ತಮಗೆ ಈ ಪತ್ರವನ್ನು ಬರೆದುಕೊಳ್ಳುತ್ತಿದ್ದು, ಆದರೆ ದೇವದುರ್ಗದಲ್ಲಿ ದೈನಂದಿನ ಕರ್ತವ್ಯ ನಿರ್ವಹಿಸಲು ನೈತಿಕ ಸ್ಥೈರ್ಯ ಕುಸಿದು ಮಾನಸಿಕ ಯಾತನೆಗಳಾಗುತ್ತಿದೆ. ಸದ್ಯ ನಾವು ಜೀವದ ಭಯದಲ್ಲಿ ಕರ್ತವ್ಯ ನಿರ್ವಹಿಸುತ್ತಿದ್ದೇವೆ. ಕಾರಣ ಮಾನ್ಯರವರು ನಮ್ಮ ಮತ್ತು ನಮ್ಮ ಕುಟುಂಬದವರನ್ನು ರಕ್ಷಣೆ ಮಾಡುವುದು ಅವಶ್ಯಕವಾಗಿರುತ್ತದೆ.

**ಮಾನ್ಯರವರು ಸಿಬ್ಬಂಧಿಯವರನ್ನು ವರ್ಗಾವಣೆ ಮಾಡುವುದಾಗಲಿ ಅಥವಾ ಅಮಾನತ್ತು ಮಾಡುವುದಾಗಲಿ ಮಾಡಿದಲ್ಲಿ ನಾವು ಮತ್ತು ನಮ್ಮ ಕುಟುಂಬದವರು ಪುನ: ಆತಂಕಕ್ಕೆ ಒಳಗಾಗಿ ನಮ್ಮ ಕುಟುಂಬಗಳು ಮಾನಸಿಕ ಮಾನಸಿಕ ಖಿನ್ನತೆಗೆ ಒಳಗಾಗಬಹುದು.**

**ಕಾರಣ ಮಾನ್ಯರವರು ನಮ್ಮ ಕುಟುಂಬಗಳನ್ನು ಹಿತದೃಷ್ಟಿಯಿಂದ ನಮಗೆ ರಕ್ಷಣೆ ನೀಡಿ, ಒಂದು ವೇಳೆ ಶಿಸ್ತು ಕ್ರಮ ಜರುಗಿಸುವುದಾದರೆ ದೇವದುರ್ಗ ಮತ್ತು ಸಂಚಾರ ಠಾಣೆಯ ಎಲ್ಲಾ ಸಿಬ್ಬಂಧಿಯವರನ್ನು ಸಾಮೂಹಿಕವಾಗಿ ವರ್ಗಾವಣೆ ಮಾಡಲು ವಿನಂತಿಸಿಕೊಳ್ಳುತ್ತೇವೆ.**

**ದೇವದುರ್ಗ ಮತ್ತು ಸಂಚಾರ ಠಾಣೆಯ ನೊಂದ ಎಲ್ಲಾ ಸಿಬ್ಬಂಧಿಗಳ ಸಹಿ**

| ಕ್ರ.ಸಂ | ಹೆಸರು | ಹುದ್ದೆ | ಸಹಿ/– |
|---|---|---|---|
| 1 | ಬಸವರಾಜ | HC 07 | |
| 2 | ಶಿವಣ್ಣ | HC 88 | |
| 3 | ಹನುಮಂತಪ್ಪ | HC 128 | |
| 4 | ಯಲ್ಲಪ್ಪ | HC 353 | |
| 5 | ನೂರ್‌ನಾಯ್ಕ | HC144 | |
| 6 | ಬಸವಂತ್ರಾಯ | HC166 | |
| 7 | ಮರಸಣ್ಣ | HC 227 | |
| 8 | ಪ್ರಕಾಶ | HC 251 | |
| 9 | ಚಾಂದ್ ಪಾಷಾ | HC 256 | |
| 10 | ಪ್ರೇಮಾ | WHC 263 | |
| 11 | ಈರೇಶ | HC 276 | |
| 12 | ಬಸವರಾಜ | HC 349 | |
| 13 | ದೇವಣ್ಣ | HC 354 | |
| 14 | ಹನುಮಂತ | PC 24 | |
| 15 | ಚನ್ನಪ್ಪ | PC 33 | |
| 16 | ಪರಮಣ್ಣ | PC 39 | |
| 17 | ಶರಣಬಸವ | PC 143 | |
| 18 | ಶಿವಕುಮಾರ | PC 155 | |
| | ಬಾದೆಪ್ಪ | CHC 143 | |

| | | | |
|---|---|---|---|
| 19 | ಅಲ್ಲಾಭಕ್ಷ | PC 159 | |
| 20 | ರಾಜೇಶ | PC 170 | |
| 21 | ಮಹೇಶ | PC 172 | |
| 22 | ಚಂದ್ರಶೇಖರ ರೆಡ್ಡಿ | PC 189 | |
| 23 | ಸಿದ್ದಪ್ಪ | PC 194 | |
| 24 | ವೆಂಕೋಬ | PC 225 | |
| 25 | ಚೆನ್ನಪ್ಪ | PC 258 | |
| 26 | ಮೌನೇಶ | PC 263 | |
| 27 | ಹನುಮಂತ | PC 312 | |
| 28 | ಕೆ. ದೇವರಾಜ | PC 393 | |
| 29 | ಶಿವಪ್ಪ | PC 429 | |
| 30 | ದೇವರಾಜ. ಎ. | PC 441 | |
| 31 | ಹನುಮಂತ್ರಾಯ | PC 499 | |
| 32 | ಎಂ.ಇಸ್ಮಾಯಿಲ್ | PC 663 | |
| 33 | ಸುರೇಶ ಬಾಬು | PC 665 | |
| 34 | ಪ್ಯಾರಿ ಬೇಗಂ | WPC 348 | |
| 35 | ಬಸಮ್ಮ ಎಸ್. | WPC 502 | |
| 36 | ಮಹೇಶ್ವರಿ | WPC 605 | |

| ಕ್ರ. ಸಂ. | ಹೆಸರು | ಹುದ್ದೆ | ಸಹಿ/- |
|---|---|---|---|
| 1. | ಶ್ರೀ. ರಾಜಾಸಾಬ್ | ಹೆಚ್.ಸಿ– 38 | |
| 2. | ಶ್ರೀ. ಹನುಮಂತ | ಹೆಚ್.ಸಿ–102 | |
| 3. | ಶ್ರೀ ಬಸಯ್ಯ | ಹೆಚ್.ಸಿ–170 | |
| 4. | ಶ್ರೀ ಚನ್ನಪ್ಪ | ಹೆಚ್.ಸಿ–194 | |
| 5. | ಶ್ರೀ. ಲಕ್ಷ್ಮಣ | ಹೆಚ್.ಸಿ–314 | |
| 6. | ಶ್ರೀ. ಗಂಗಾಧರ | ಹೆಚ್.ಸಿ–328 | |
| 7. | ಶ್ರೀ ಮಂಜುನಾಥ | ಹೆಚ್.ಸಿ–365 | |
| 8. | ಶ್ರೀಮತಿ ಸಂಗೀತಾ | ಮ.ಹೆಚ್.ಸಿ–283 | |
| 9. | ಶ್ರೀ. ಶಿವಶಂಕರ | ಸಿಪಿಸಿ–03 | |
| 10. | ಶ್ರೀ.ಪ್ರಶಾಂತ ಕುಮಾರ | ಪಿಸಿ–13 | |
| 11. | ಶ್ರೀ. ಮಹೇಶ | ಪಿಸಿ–62 | |
| 12. | ಶ್ರೀ ಅಂಬರೇಶ | ಸಿಪಿಸಿ–87 | |
| 13. | ಶ್ರೀ. ವಸಂತಕುಮಾರ | ಪಿಸಿ–121 | |
| 14. | ಶ್ರೀ. ಮೋಹನ | ಪಿಸಿ–148 | |
| 15. | ಶ್ರೀ. ಸುರೇಶ | ಪಿಸಿ–178 | |
| 16. | ಶ್ರೀ. ರಮೇಶ | ಪಿಸಿ– 193 | |
| 17. | ಶ್ರೀ.ಸಯ್ಯದ್‌ರಿಯಾಜ್ | ಪಿಸಿ– 234 | |
| 18. | ಶ್ರೀ. ಹುಚ್ಚ ಬಸವ | ಪಿಸಿ–340 | |
| 19. | ಶ್ರೀ. ಯಲ್ಲಪ್ಪ | ಪಿಸಿ–350 | |
| 20. | ಶ್ರೀ. ಸಂಗಪ್ಪ | ಪಿಸಿ–352 | |
| 21. | ಶ್ರೀ. ಬಸವರಾಜ | ಪಿಸಿ–405 | |
| 22. | ಶ್ರೀ. ಪ್ರಭುಗೌಡ | ಪಿಸಿ– 411 | |
| 23. | ಶ್ರೀ.ಮತಿ. ಸುನೀತಾ | ಮಪಿಸಿ–317 | |